

ಬಯಸುತ್ತಿರುವುದಾದರೂ ಏನು? ಕಣ್ಣು ಕೋರೈಸುವ ಬೆಳಕು, ಎತ್ತೆತ್ತರದ ಕಟ್ಟಡಗಳು, ಅತೀವ ವೇಗ, ಅಸೀಮ ತಂತ್ರಜ್ಞಾನ, ಸರಿಸಾಟಿಯಿಲ್ಲದ ಸಂಶೋಧನೆಗಳ ನಡುವಲ್ಲಿ ಸುಪ್ತವಾಗಿ ಹರಿಯುತ್ತಿರುವ ಭಾವವಾಹಿನಿಯಾದರೂ ಯಾವುದು? ಒಂದೇ ಪೆಟ್ಟಿಗೆ ವೈರಿಯನ್ನು ಹೊಡೆದುರುಳಿಸುವ ವ್ಯಕ್ತಿಯ ಅಟ್ಟಹಾಸಕ್ಕಿಂತ, ಆತನ ನಿಸ್ಸಹಾಯಕತೆಯ ಅಂಶವೇ ಅವರಿಗೆ ಇಷ್ಟವಾಗುತ್ತಿರುವುದೇಕೆ? ವ್ಯಕ್ತಿಯನ್ನು ಅವನ ಸಹಜ ದೌರ್ಬಲ್ಯಗಳೊಂದಿಗೇ ಒಪ್ಪಿಕೊಳ್ಳುವುದರಲ್ಲಿ, ಸೋಲನ್ನು ಸ್ವೀಕರಿಸುವುದರಲ್ಲಿ ತಪ್ಪಿಲ್ಲ ಎಂದು ಅವರಿಗೆ ಅನ್ನಿಸುತ್ತಿರಬಹುದೇ? ಇದು ಭೀಕರ ಯುದ್ಧವೊಂದು ಕಲಿಸಿ ಹೋದ ಪಾಠವಿರಬಹುದೇ? ಅಥವಾ, ನಾಯಕನೂ ಸಾಮಾನ್ಯನಾದಾಗ, ಸಾಮಾನ್ಯನೂ ನಾಯಕನಾಗುವ ಸಾಧ್ಯತೆಯಲ್ಲಿ ಹುರುಳನ್ನವರು ಕಂಡಿರಬಹುದೇ? ಅಹುದೆಂದಾದರೆ, ಅದು ಪ್ರತಿ ದೇಶದ ಇಂದಿನ ತುರ್ತು ಕೂಡಾ ಅಲ್ಲವೇ?

ಕೊನೆಯಲ್ಲಿ – ಬೆಂಗಳೂರಿನಲ್ಲಿ ಎಲೆಕ್ಟ್ರಾನಿಕ್ ಸಿಟಿ ಸಾಫ್ಟ್‌ವೇರ್ ಕೇಂದ್ರವಿದ್ದಂತೆ, ನ್ಯೂಯಾರ್ಕಿನಲ್ಲಿ ಆರ್ಥಿಕ ವಹಿವಾಟುಗಳ ವಾಲ್‌ಸ್ಟ್ರೀಟ್ ಇದ್ದಂತೆ, ಟೋಕಿಯೊದಲ್ಲಿ ಈ ಮಾಂಗಾ ಸಂಬಂಧೀ ಚಟುವಟಿಕೆಗಳಿಗೆಂದೇ ಒಂದು ಇಡೀ ಪ್ರದೇಶ ಮೀಸಲಾಗಿದೆ. ಅಲ್ಲಿ ಮಾಂಗಾ ಪ್ರಕಾಶಕರ ಗಗನಚುಂಬಿ ಕಟ್ಟಡಗಳಿವೆ. ಕಥೆಗಾರರ ಕಚೇರಿಗಳು, ವಿತರಕರ ಕೂಟ, ಪ್ರಿಂಟಿಂಗ್ ಪ್ರೆಸ್ಸುಗಳು, ಪ್ರದರ್ಶನ ಮಳಿಗೆಗಳು, ಅನಿಮೆ ಸ್ಟುಡಿಯೊಗಳು... ಹೀಗೆ ಈ ಎಲ್ಲವುಗಳ ಆಗರ ಆ ಪ್ರದೇಶ. ಇಷ್ಟೇ ಹೇಳಿ ನಿಲ್ಲಿಸಿದರೆ ಅದು ಕೇವಲ ಏಕಮುಖೀ ನೋಟವಾದೀತು. ಸಾಕಷ್ಟು ಬರಹಗಾರರು, ಕಲಾಕಾರರು, ತಂತ್ರಜ್ಞರು ಅಲ್ಲಿ ತುಳಿತಕ್ಕೂ ಒಳಗಾಗುತ್ತಿದ್ದಾರೆ. ಕಡಿಮೆ ಸಂಬಳ, ಹೆಚ್ಚು ದುಡಿಮೆಯ ಅನಿವಾರ್ಯತೆ ಇದೆ ಅವರಿಗೆ. ಬೆಳಗಾಗುವುದರೊಳಗೆ ಹೊಸ ಎಪಿಸೋಡಿಗೆ ಕಥೆ ಬರೆದು, ಚಿತ್ರ ರಚಿಸಿಕೊಡುವ ಒತ್ತಡಕ್ಕೆ ಸಿಲುಕಿದವರಿದ್ದಾರೆ. ಬಿಡುಗಡೆಯ ಸಾಧನವಾಗಿ ಹುಟ್ಟಿಕೊಂಡ ಕಲೆ, ಶೋಷಣೆಯ ಆಯುಧವೂ ಆಗಬಹುದಾದ ದುರಂತದ ನಿದರ್ಶನಗಳೂ ಯಥೇಚ್ಛ ಸಿಗುತ್ತವಲ್ಲಿ. ಸೃಜನಶೀಲ ಪ್ರಕಾರವೊಂದಕ್ಕೆ ವಾಣಿಜ್ಯದ ಸೋಂಕು ತಗಲಿದಾಗ ಒದಗಬಹುದಾದ ಆಪತ್ತೇ ಇದು? ಹಾಗಾಗದ ಪಕ್ಷದಲ್ಲಿ, ಕಲಾ ನಮೂನೆಯೊಂದು ತನ್ನ ಅಸ್ಮಿತೆಯನ್ನೂ ಕಾದುಕೊಂಡು, ತನ್ನೊಡಲ ಪುಳಕವನ್ನೂ ಉಳಿಸಿಕೊಂಡು, ಆರ್ಥಿಕವಾಗಿಯೂ ವಿಜೃಂಭಿಸಬಹುದಾದ ಮಾರ್ಗವಾದರೂ ಯಾವುದು?